# ಲೀನಾ ಪ್ರೇಮಾಯಣ..!

ವಿದೇಶದಿಂದ ಓದಲು ಬಂದಿರುವ ಕೆಲ ಮಹಿಳೆಯರು ಇಲ್ಲಿನ ನಿಸರ್ಗ ಸಿರಿ, ಆಹಾರ ಪದ್ಧತಿ, ಜನರ ಸ್ನೇಹಮಯ ವಾತಾವರಣಕ್ಕೆ ಮನಸೋತಿದ್ದಾರೆ. ಅಂಥವರಲ್ಲಿ ಜರ್ಮನಿಯಿಂದ ಬಂದ ಲೀನಾ ರೋಬ್ರ ಒಬ್ಬರು. ಇವರು ಇಲ್ಲಿನ ವರ್ತಕರೊಬ್ಬರನ್ನು ವರಿಸಿ ಮದುವೆಯೂ ಆಗಿದ್ದಾರೆ.

ಲೀನಾ ಉನ್ನತ ಶಿಕ್ಷಣಕ್ಕಾಗಿ 2009ರಲ್ಲಿ ಬೆಂಗಳೂರಿಗೆ ಬಂದರು. ಸದ್ಯ ಪಿಎಚ್‌ಡಿಯನ್ನೂ ಮುಗಿಸಿದ್ದಾರೆ ಲೀನಾ. ಬಾರ್ಸಿಲೋನದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದ ಲೀನಾ ಪಿಹೆಚ್‌ಡಿಯನ್ನು ಮಾಡಬೇಕು ಎಂದು ನಿರ್ಧರಿಸಿದರು. ಜಗತ್ತಿನಾದ್ಯಂತ ಶೈಕ್ಷಣಿಕ ಪ್ರಗತಿ ಹಾಗೂ ಗುಣಮಟ್ಟವಿರುವ ನಗರವನ್ನು ಪರಿಶೀಲಿಸಿದರು. ಆಗ ಅವರಿಗೆ ಸಿಕ್ಕಿದ್ದು ಬೆಂಗಳೂರು ಎಂಬ ಶೈಕ್ಷಣಿಕ ನಗರಿ. ಇದನ್ನೇ ಆಯ್ಕೆ ಮಾಡಿಕೊಂಡು 2009ರಲ್ಲಿ ಬೆಂಗಳೂರಿಗೆ ಬಂದರು. ಮೊದಲು ಒಂದು ವರ್ಷ ಇಲ್ಲೇ ಪಿಹೆಚ್‌ಡಿ ಮಾಡಿ ಮುಂದೆ ಇಲ್ಲಿ ಹೊಂದಾಣಿಕೆ ಆಗದೇ ಇದ್ದರೆ ವಾಪಸ್ ಹೋಗಬೇಕು ಎಂದು ಎಣಿಕೆ ಹಾಕಿಕೊಂಡು ಬಂದ ಲೀನಾಗೆ ಇಲ್ಲಿನ ವಾತಾವರಣ, ಶಿಕ್ಷಣದ ಗುಣಮಟ್ಟ, ಆಹಾರ ಪದ್ಧತಿ, ಉತ್ತಮ ಸಂಸ್ಕೃತಿ ಎಲ್ಲವೂ ಹಿಡಿಸಿದೆ. ಈಗ ಲೀನಾ ಮನಸ್ಸು ಬದಲಿಸಿದ್ದಾರೆ. ಖಾಯಂ ಆಗಿ ನೆಲೆ ನಿಲ್ಲುವ ನಿರ್ಧಾರ ಕೈಗೊಂಡಿದ್ದಾರೆ.

'ಬೆಂಗಳೂರು ನನಗೆ ಬಹಳ ಹಿಡಿಸಿದೆ. ಈ ನಗರವನ್ನು ಬಹುವಾಗಿ ಪ್ರೀತಿಸುತ್ತೇನೆ. ಇಲ್ಲಿನ ಜನ ಸ್ನೇಹಪರರು. ಯಾವುದೇ ಸಮಯದಲ್ಲಿಯೂ ಸಹಾಯ ಮಾಡುತ್ತಾರೆ, ವಿದೇಶೀಯರ ಮೇಲೆ ಆದರಾಭಿಮಾನ ತೋರುತ್ತಾರೆ. ಇಂಥ ಸ್ನೇಹಶೀಲ ಮನೋಭಾವದ ಜನರು ಬೇರೆ ಯಾವುದೇ ದೇಶದಲ್ಲಿ ಕಾಣಸಿಗುವುದು ಕಷ್ಟ ಎಂಬುದು ನನ್ನ ಅಭಿಪ್ರಾಯ' ಎನ್ನುತ್ತಾರೆ ಲೀನಾ.

'ಉದ್ಯಾನನಗರಿಯ ಹಸಿರು ಸಿರಿಯನ್ನು ಬಹುವಾಗಿ ಮೆಚ್ಚುತ್ತೇನೆ. ಲಾಲ್‌ಬಾಗ್, ಕಬ್ಬನ್‌ಪಾರ್ಕ್‌ಗಳಲ್ಲಿ ಸದಾ ಹಸಿರು ಹಸಿರಾಗಿರುವ ಉದ್ಯಾನ, ವರ್ಣರಂಜಿತ ವೈವಿಧ್ಯಮಯ ಹೂವುಗಳು ನಗರದ ಸೊಬಗನ್ನು ಹೆಚ್ಚಿಸಿದೆ. ರಸ್ತೆ ಅಂಚಿನಲ್ಲಿರುವ ಮರಗಳು ಕೂಡ ನಗರದ ಅಂದವನ್ನು ಕಾಪಾಡುವಲ್ಲಿ ಸಹಕರಿಸುತ್ತವೆ. ಆದರೆ ಇತ್ತೀಚೆಗೆ ರಸ್ತೆ ಅಗಲೀಕರಣ, ಪ್ರಕೃತಿ ವಿಕೋಪದಿಂದಾಗಿ ಹಲವಾರು ಮರಗಳು ನೆಲಕ್ಕುರುಳುತ್ತಿರುವುದು ಮನಸ್ಸಿಗೆ ಬೇಸರ ತಂದಿದೆ. ಏನೇ ಆದರೂ ಇಂಥ ನಿಸರ್ಗಸಿರಿ ಬೇರೆ ಯಾವುದೇ ನಗರದಲ್ಲಿ ಕಂಡಿಲ್ಲ ' ಎಂಬುದು ಲೀನಾ ಅವರ ಖಚಿತ ನುಡಿಗಳು.

## ಪ್ರೇಮಾಯಣ..!

ಲೀನಾ ಬದುಕೇ ಒಂದು ಪ್ರೇಮಾಯಣ. ಕಳೆದ ವರ್ಷ ಲೀನಾ ಬೈಸಿಕಲ್ ಕೊಳ್ಳಲೆಂದು ಸೈಕಲ್ ಮಳಿಗೆಗೆ ಹೋದರಂತೆ. ಅಲ್ಲಿ ನಿಖಿಲ್ ಎಂಬ ಸೈಕಲ್ ಮಳಿಗೆ ಮಾಲೀಕನ ಪರಿಚಯವಾಯಿತಂತೆ. ಸೈಕಲ್ ಕೊಳ್ಳಲು ಹೋದ ಲೀನಾ ಖರೀದಿಸುವುದನ್ನು ಮರೆತು ಹರಟೆ ಹೊಡೆಯಲಾರಂಭಿಸಿದರಂತೆ. ಪರಿಚಯ ಸ್ನೇಹಕ್ಕೆ ತಿರುಗಿ ಸ್ನೇಹ ಪ್ರಣಯವಾಗಿ ಮದುವೆಯಲ್ಲಿ ಅಂತ್ಯ ಹಾಡಿತಂತೆ. ಈಗ ಲೀನಾ ಸೈಕಲ್ ಮಳಿಗೆಯ ಮಾಲೀಕನ ಮಡದಿ..!

ಪತಿ ನಿಖಿಲ್ ಜತೆ ಸೈಕಲ್‌ನಲ್ಲೇ ನಗರ ಸುತ್ತುವುದು ಲೀನಾ ಹವ್ಯಾಸ. ವಾರಾಂತ್ಯದಲ್ಲಿ ಪ್ರತ್ಯೇಕ ಸೈಕಲ್‌ಗಳಲ್ಲಿ ಹೇಸರಘಟ್ಟ, ನಂದಿಹಿಲ್ಸ್ ವರೆಗೂ ಹೋಗಿ ಬರುತ್ತಾರೆ. ಸೈಕಲ್ ತುಳಿಯುವ ಹವ್ಯಾಸ ಇವರಿಗೆ ಬಹಳ ಪ್ರಿಯವಂತೆ.

'ನನ್ನ ತವರೂರು ಜರ್ಮನಿಯಲ್ಲಿಯೂ ಹಸಿರು ನಳನಳಿಸುತ್ತದೆ. ಹೀಗಾಗಿ ಹೆತ್ತವರ ಜತೆಗೆ ಹಸಿರು ಸಿರಿಯನ್ನೂ ಮಿಸ್ ಮಾಡಿಕೊಂಡೆ ಅನಿಸ್ತಾ ಇದೆ. ಏನೇ ಆದರೂ ನಿಸರ್ಗದ ಮಡಿಲಲ್ಲಿ ಜೀವನ ನಡೆಸುವುದು ಯಾವತ್ತಿಗೂ ಆಪ್ಯಾಯಮಾನ' ಎನ್ನುತ್ತಾರೆ ಲೀನಾ.

'ಇಲ್ಲಿನ ಆಹಾರ ಪದ್ಧತಿ ಸಂಸ್ಕೃತಿ ಬಗ್ಗೆ ಎಷ್ಟು ಹೇಳಿದರೂ ಸಾಲದು. ವೈವಿಧ್ಯಮಯ ತಿಂಡಿ ತಿನಿಸುಗಳು, ನೂರಾರು ಪೇಯ ಪಾನೀಯಗಳು, ದೋಸೆ, ರೊಟ್ಟಿ, ಪರಾಟ, ಚಿಕನ್ ಮಸಾಲ, ಮೀನು ಫ್ರೈ, ನೂಡಲ್ಸ್, ಪಾಶ್ಚಾತ್ಯ ಅಡುಗೆ ಊಟ.. ಆಹಾ ಒಂದೇ ಎರಡೇ.. ಬೆಲೆ ನೋಡಿದರೆ ಹತ್ತು ರೂಪಾಯಿಯಿಂದ ಮೂರು ಸಾವಿರದವರೆಗಿನ ತಿಂಡಿ ತೀರ್ಥಗಳು. ರವಾ ದೋಸೆ, ಉಪ್ಪಿಟ್ಟು, ಚಟ್ನಿ ಬಹಳ ಪ್ರಿಯ. ಮನೆಯಲ್ಲೂ ಮಾಡುತ್ತೇವೆ. ಬಗೆ ಬಗೆ ದೋಸೆ ಜತೆಗೆ ಚಟ್ನಿ ವೆರೈಟಿಗಳು.. ಅಂತೂ ಆಹಾರ ಪ್ರಿಯರ ಸ್ವರ್ಗವೇ ಬೆಂಗಳೂರು ಎಂದರೆ ತಪ್ಪಿಲ್ಲ..' ಎಂದು ಪುಳಕಗೊಳ್ಳುತ್ತಾರೆ ಈ ವಿದೇಶಿ ಮಹಿಳೆ.



ಜರ್ಮನಿಯಿಂದ ಬಂದ ಲೀನಾ ಚಿತ್ರ: ಕಿಶೋರ್‌ಕುಮಾರ್ ಬೋಳಾರ್

ಲೀನಾ ಕನ್ನಡ ಕಲಿಕೆ ಆರಂಭಿಸಿದ್ದಾರೆ. 'ಎಷ್ಟು, ಕೊಡಿ, ಬನ್ನಿ, ನಮ್ಮ ಊರು ಬೆಂಗಳೂರು..' ಮುಂತಾದ ಕನ್ನಡ ಶಬ್ದಗಳು ಲೀನಾ ನಾಲಿಗೆಯಲ್ಲಿ ಹೊರಳಾಡುತ್ತವೆ. ಇನ್ನೂ ಹಲವು ಶಬ್ದಗಳನ್ನು ಉಚ್ಚರಿಸಲು ಪ್ರಯತ್ನಿಸುತ್ತಾರೆ. ಒಟ್ಟಿನಲ್ಲಿ ಕನ್ನಡ ಕಲಿಯಬೇಕೆಂಬ ಹಂಬಲ ಬಲವಾಗಿ ಬೇರೂರಿದೆ. 'ಇನ್ನು ಕೆಲ ತಿಂಗಳಲ್ಲಿ ಕಲಿತೇ ಕಲಿಯುತ್ತೇನೆ' ಎಂಬ ಆತ್ಮವಿಶ್ವಾಸ ವನ್ನೂ ವ್ಯಕ್ತಪಡಿಸುತ್ತಾರೆ ಇವರು.

**ಅವನೀಶ್**